ಅಸಲು ದಾವಾ.ನಂ. 388/2022
ಡಿ ಡಬ್ಲ್ಯೂ-1

ದಿನಾಂಕಃ 30-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು: ವಾದಿ ಪರ ಶ್ರೀ ವಿಎಬಿ ವಕೀಲರಿಂದ:**

ತಿಪ್ಪಣ್ಣ ಕಾಮಣ್ಣನವರ ಇವರಿಗೆ ಗದಿಗೆಪ್ಪ ಮತ್ತು ಸಂಗಪ್ಪ ಎಂಬ ಇಬ್ಬರು ಮಕ್ಕಳು ಇದ್ದರು ಎಂದರೆ ಸರಿ. ನಾನು ಸಂಗಪ್ಪನ ಮಗ ಎಂದರೆ ಸರಿ. 2 ನೇ ಪ್ರತಿವಾದಿ ನನ್ನ ಸಹೋದರ ಮತ್ತು 3 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. ಗದಿಗೆಪ್ಪ ಇವರ ಮೊದಲನೆಯ ಒಬ್ಬ ಮಗಳು ಮತ್ತು 2 ನೇ ಹೆಂಡತಿಗೆ ಇಬ್ಬರು ಮಕ್ಕಳು ಇರುತ್ತಾರೆ, ಅವರೆಂದರೆ ಬಸವರಾಜ ಮತ್ತು ಹನುಮಂತ ಎಂದರೆ ಸರಿ. ಸಾಂಯವ್ವ ಇವರು ಗದಿಗೆಪ್ಪನ ಹೆಂಡತಿ ಎಂದರೆ ಸರಿ. ತಿಪ್ಪಣ್ಣನ ಹೆಂಡತಿಯ ಹೆಸರು ತಂಗೆವ್ವ ಎಂದರೆ ಸರಿ. ಸದರಿ ತಂಗೆವ್ವಳ ಅಕ್ಕನ ಹೆಸರು ದೊಡ್ಡವ್ವ ಕಾಂತಿ ಎಂದರೆ ಸರಿ. ದೊಡ್ಡವ್ವ ಕಾಂತಿ ಇವರು ತಾವು ಖರೀದಿಸಿದ ಜಮೀನು ಸರ್ವೆ ನಂ.228/1/5 ಒಟ್ಟು ಕ್ಷೇತ್ರ 12 ಎಕರೆ 12 ಗುಂಟೆ ಪೈಕಿ, ಕ್ಷೇತ್ರ 10 ಎಕರೆ 12 ಗುಂಟೆ ಗದಿಗೆಪ್ಪ ಇವರಿಗೆ ಮತ್ತು ಕ್ಷೇತ್ರ 2 ಎಕರೆ ಪದ್ದವ್ವ ಇವರಿಗೆ ಮೃತ್ಯುಪತ್ರದ ಮೂಲಕ ವರ್ಗಾಯಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ಆಸ್ತಿ ನನ್ನ ಅಜ್ಜ ತಿಪ್ಪಣ್ಣನ ಆಸ್ತಿ ಎಂದು ಹೇಳುತ್ತಾರೆ. ಸದರಿ ಆಸ್ತಿ ನನ್ನ ಅಜ್ಜ ತಿಪ್ಪಣ್ಣ ಇವರಿಗೆ ತೋರಿಸಿದ ಆಸ್ತಿ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ಸದರಿ ಆಸ್ತಿಯನ್ನು ದೊಡ್ಡವ್ವ ಕಾಂತಿ ಇವರು ಖರೀದಿಸಿದ ಕುರಿತು ವಾದಿಯರು ಖರೀದಿ ಪತ್ರ ಹಾಜರಪಡಿಸಿರುತ್ತಾರೆ ಎಂದರೆ ಸರಿ. ದೊಡ್ಡವ್ವ ಕಾಂತಿ ಇವರು ಮೃತಪಟ್ಟನಂತರ ಮೃತ್ಯುಪತ್ರದ ಆಧಾರದ ಮೇಲೆ ಗದಿಗೆಪ್ಪ ಮತ್ತು ಪದ್ದವ್ವ ಇವರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ದಾಖಲಾಗಿರುತ್ತವೆ ಎಂದರೆ ಸರಿ. ಗದಿಗೆಪ್ಪ ಇವರ ಮರಣದ ನಂತರ ಅವರ ವಾರಸುದಾರರ ಹೆಸರು ಪಹಣಿ ಪತ್ರಿಕೆಯಲ್ಲಿ ವಾರಸಾ ಮೂಲಕ ಬಂದಿರುತ್ತವೆ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾವು ಕಬ್ಜಾ ವಹಿವಾಟು ಹೊಂದಿರುತ್ತೇವೆ ಎಂದು ಹೇಳುತ್ತಾರೆ. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನ ಹೊಂದಿದ ಕುರಿತು ಕರಪಾವತಿ ಮತ್ತು ವಿದ್ಯುಚ್ಛಕ್ತಿ ಪಾವತಿಯ ರಶೀದಿಗಳು ಇರುವುದಿಲ್ಲ. ಸದರಿ ಜಮೀನುಗಳಲ್ಲಿ ಬೆಳೆದ ಬೆಳಯನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಮತ್ತು ಬೇರೆ ಕಡೆ ಮಾರಾಟ ಮಾಡಿದ ಕುರಿತು ಯಾವುದೇ ದಾಖಲೆಗಳು ಇರುವುದಿಲ್ಲ. ದಾವಾ ಆಸ್ತಿಯಲ್ಲಿ ನಾವು ಸ್ವಾಧೀನತೆ ಹೊಂದಿರುತ್ತೇವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಜಮೀನು ಸರ್ವೆ ನಂ.228/1/ಬ ಕ್ಷೇತ್ರ 10 ಎಕರೆ 12 ಗುಂಟೆ ಗದಿಗೆಪ್ಪ ಇವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿ ಅವರ ಸ್ವಂತ ಆಸ್ತಿ ಇರುವುದು ನನಗೆ ಗೊತ್ತಿದ್ದರೂ ಅಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನು ಸರ್ವೆ ನಂ.164/1 ಅ ಮತ್ತು ಜಮೀನು ಸರ್ವೆ ನಂ.101/5 ಗದಿಗೆಪ್ಪ, ನನ್ನ ತಂದೆ ಸಂಗಪ್ಪ ಮತ್ತು ನಾನು ಮತ್ತು ನನ್ನ ತಾಯಿ ಕೂಡಿಕೊಂಡು ಮಾರಾಟ ಮಾಡಿ, ನಿಪಿ-23 ಮತ್ತು 24 ರಂತೆ ಖರೀದಿ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಗದಿಗೆಪ್ಪ ತನ್ನ ಅಡಚಣೆ ಸಲುವಾಗಿ ಒಬ್ಬನೆ ಮಾರಾಟ ಮಾಡಿರುತ್ತಾನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗದಿಗೆಪ್ಪ ಇವರು 2005 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರ ಮಗ ಬಸಪ್ಪ 2009 ರಲ್ಲಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಗದಿಗೆಪ್ಪ ತನ್ನ ಕೊನೆಯ ದಿನಗಳಲ್ಲಿ ಸುಮಾರು 2-3 ವರ್ಷಗಳವರೆಗೆ ಆರಾಮವಿಲ್ಲದೆ ಹಾಸಿಗೆ ಹಿಡಿದಿದ್ದರು ಎಂದರೆ ಸರಿ. ಅವರ ಮಗನಾದ 5 ನೇ ವಾದಿ ಅಭ್ಯಾಸ ಮಾಡಿಲ್ಲ ಎಂದರೆ ಸರಿಯಲ್ಲ. 3 ನೇ ವಾದಿಯ ಗಂಡ ಬಸಪ್ಪ ತನ್ನ ಮರಣ ಪೂರ್ವದಲ್ಲಿ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಮೃತ ತಿಪ್ಪಣ್ಣ ಇವರಿಗೆ ಸೇರಿದ ಆಸ್ತಿಗಳನ್ನು ನಾವೇ ನೋಡಿಕೊಳ್ಳುತ್ತಿದ್ದೆವು ಎಂದರೆ ಸರಿ. ಗದಿಗೆಪ್ಪ ಇವರ ಅನಾರೋಗ್ಯದ ಸಮಯದಲ್ಲಿ ನಾನು ಮತ್ತು ನನ್ನ ತಾಯಿ ಕೂಡಿಕೊಂಡು ದಾವಾ ಆಸ್ತಿಯ ಕುರಿತು ಅಪಸಾತ ವಾಟ್ನಿ ಪತ್ರ ತಯಾರಿಸಿ ತಹಶೀಲ್ದಾರರಿಗೆ ನೀಡಿದ್ದೆವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಗದಿಗೆಪ್ಪ ಇವರು ನಮಗೆ ಸದರಿ ಆಸ್ತಿಯನ್ನು ಪಾಲಿನ ರೂಪದಲ್ಲಿ ಬಿಟ್ಟುಕೊಟ್ಟಿದ್ದರು ಎಂದು ಹೇಳುತ್ತಾರೆ. ಸದರಿ ಗದಿಗೆಪ್ಪ ಇವರು ಆಸ್ತಿಯನ್ನು ನಮ್ಮ ಪಾಲಿಗೆ ಬಿಟ್ಟು ಕೊಟ್ಟಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಸಾತ ವಾಟ್ನಿ ವರದಿಯಲ್ಲಿ ಗದಿಗೆಪ್ಪ ಇವರ ಸಹಿ ಇಲ್ಲ ಎಂದು ತಹಶೀಲ್ದಾರರು ಅರ್ಜಿಯನ್ನು ಮರಳಿ ಕೊಟ್ಟಿದ್ದರು ಎಂದರೆ ಸರಿಯಲ್ಲ. ನಿಪಿ-13 ರಲ್ಲಿ ಗದಿಗೆಪ್ಪ ಇವರ ಸಹಿ ಇರುವುದಿಲ್ಲ, ಕಾರಣ ವರ್ಗಾವಣೆ ಮಂಜೂರು ಮಾಡದೇ ಹಿಂಬರಹ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಎರಡು ದೃಢೀಕೃತ ನಕಲುಗಳನ್ನು ತೋರಿಸಿದಾಗ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದು ಹೇಳುತ್ತಾರೆ. ಗದಿಗೆಪ್ಪ ಮತ್ತು ಅವರ ಕುಟುಂಬದ ಸದಸ್ಯರಿಗೆ ಗೊತ್ತಾಗದಂತೆ ದಾವಾ ಆಸ್ತಿಯನ್ನು ನಾವು ಖೊಟ್ಟಿ ದಾಖಲೆಗಳ ಆಧಾರದ ಮೇಲೆ ವರ್ಗಾವಣೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಜಮೀನು ಸರ್ವೆ ನಂ.228/1 ರಲ್ಲಿ ನಮಗೆ ಸೇರಿದ ಮನೆ ಇದೆ ಎಂದರೆ ಸರಿಯಲ್ಲ. ನಮ್ಮ ಮತ್ತು ವಾದಿಯರ ಮನೆ ಅಕ್ಕ-ಪಕ್ಕದಲ್ಲಿ ನಮಗೆ ಸೇರಿದ ಎರಡು ಕೋಣೆಗಳು ಮತ್ತು ವಾದಿಯರಿಗೆ ಸೇರಿದ ಎರಡು ಕೋಣೆಗಳು ಇವೆ ಎಂದರೆ ಸರಿ. ನಾಲ್ಕು ಕೋಣೆಗಳ ಮನೆಯು ತಿಪ್ಪಣ್ಣ ಖರೀದಿ ಮಾಡಿದ ಆಸ್ತಿಯಲ್ಲಿವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಪದ್ದವ್ವ ಇವರು ಖರೀದಿ ಮಾಡಿದ ಆಸ್ತಿಯಲ್ಲಿದೆ ಎಂದು ಹೇಳುತ್ತಾರೆ. ಸದರಿ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಸದರಿ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು,

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA

Digitally signed by ASHAPPA
Date: 2026.06.30 17:23:42 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ